ಶ್ರೀ ಟಿ. ಚನ್ನಯ್ಯ.—ಅವರು ಯಾವ ಯಾವ ಹಳ್ಳಿಗಳಿಗೆ ಹೋಗುತ್ತಾರೋ ಅದನ್ನು ಅನುಸರಿಸಿ ಖರ್ಚಾಗುತ್ತದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ದಿನಬಿಟ್ಟು ದಿನ ಹೋಗುವುದಕ್ಕೆ ಪೆಟ್ರೋಲಿಗಾಗಿ ತಿಂಗಳೊಂದಕ್ಕೆ ನುಮಾರು ಎಷ್ಟು ಖರ್ಚು ಬೀಳಬಹುದ ?

ಶ್ರೀ ಟಿ. ಚನ್ನಯ್ಯ.—ಈಗ ನಿಗದಿಮಾಡಿರುವ ಪ್ರಕಾರ ತಿಂಗಳಿಗೆ 125 ರೂಪಾಯಿಗಳಂತೆ ಖರ್ಚು ಮಾಡಬೇಕು; ಅವಶ್ಯವಿದ್ದಲ್ಲಿ 500 ರೂಪಾಯಿಗಳ ವರೆಗೂ ಮಾಡಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ವ್ಯಾನಿನಲ್ಲಿ ಒಬ್ಬ ಡಾಕ್ಟರು, ಒಬ್ಬ ಕಾಂಪೌಂಡರು, ಒಬ್ಬ ಜವಾನ, ಡ್ರೈವರು, ಕ್ಲೀನರು ಇಷ್ಟು ಜನ ಹೋಗುತ್ತಾರಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಸಿಬ್ಬಂದಿಗಾಗಿ ತಿಂಗಳಿಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—500 ರೂಪಾಯಿಗಳ ಮೇಲೆ ಆಗಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇಷ್ಟು ಸಿಬ್ಬಂದಿ ಒಂದು ದಿವಸ ಹಳ್ಳಿಕಡೆ ಹೋಗಿ ಇನ್ನೊಂದು ದಿವಸ ಆಸ್ಪತ್ರೆ ಹತ್ತಿರವಿದ್ದರೆ ಹಳ್ಳಿಗೆ ಹೋಗದಿರುವ ದಿನ ಕೊಡುವ ಸಂಬಳ ನಿರರ್ಥಕವಾಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಡಾಕ್ಟರು, ಕಾಂಪೌಂಡರುಗಳು ಮುಂತಾದವರ ಪರ್ಫಿನ್ಸನ್ನು ಟೌನುಗಳಲ್ಲಿ ಉಪಯೋಗಿಸಿಕೊಳ್ಳಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡ್ರೈವರಿಂದ ಟೌನಿನಲ್ಲಿ ಉಪಯೋಗವೇನಿದೆ ?

ಶ್ರೀ ಟಿ. ಚನ್ನಯ್ಯ.—ಏನೂ ಇಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ ತಾಲ್ಲೂಕಾಮಳೆ 300 ಹಳ್ಳಿಗಳಮೇಲಿರುವುದರಿಂದ ವಾರಕ್ಕೆ ಮೂರು ದಿವಸ ದಿನಕ್ಕೆ ಮೂರು ಹಳ್ಳಿಯಂತೆ ವ್ಯಾನಿನಲ್ಲಿ ಹೋಗಿ ಔಷಧಿ ಕೊಡುವಾಗ ಎಲ್ಲಾ ಗ್ರಾಮಗಳಿಗೂ ಅನುಕೂಲ ಒದಗಿಸಲು ಸಾಧ್ಯವೇ ?

ಶ್ರೀ ಟಿ. ಚನ್ನಯ್ಯ.—ಈಗಿರುವ ವ್ಯವಸ್ಥೆ ಸಾಕಾಗಿದೆ. ಚಿಂತಾಮಣಿಯಲ್ಲಿರುವ ಅನುಕೂಲತೆ ಬೇರೆ ತಾಲ್ಲೂಕುಗಳಲ್ಲಿ ಇಲ್ಲ. ಅಲ್ಲಿ ದೊಡ್ಡ ಹೆರಿಗೆ ಆಸ್ಪತ್ರೆ ಮತ್ತು ಇತರ ಆಸ್ಪತ್ರೆಗಳಿವೆ, ಮೊಬೈಲ್ ಆಸ್ಪತ್ರೆ ಕೂಡ ಇದೆ. ಬೇರೆ ತಾಲ್ಲೂಕುಗಳಲ್ಲಿ ಅಷ್ಟು ಆಸ್ಪತ್ರೆಗಳಿದ್ದರೆ ಬಹಳವಾಗಿ ಸಂತೋಷಪಡುತ್ತಿದ್ದರು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಚಲಿಸುವ ಆಸ್ಪತ್ರೆ ಉಪಯೋಗ ಹಳ್ಳಿಗಳಿಗೆ ಪೂರ್ಣವಾಗಿ ಆಗುವಂತೆ ಮಾಡಲು ಮತ್ತು ಇದರ ಸಿಬ್ಬಂದಿಗಾಗುವ ಖರ್ಚು ನಿರರ್ಥಕವಾಗದಂತೆ ಮಾಡಲು ಪ್ರತಿದಿನವೂ ವ್ಯಾನು ಹಳ್ಳಿಕಡೆ ಹೋಗುವಂತೆ ಏರ್ಪಾಡು ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇದಕ್ಕಾಗಿ ತಿಂಗಳಿಗೆ ನೂರು ರೂಪಾಯಿ ಪೆಟ್ರೋಲಿಗಾಗಿ ಕೊಡುತ್ತಿದ್ದುದನ್ನು ಈಗ 125 ರೂಪಾಯಿಗಳಿಗೇರಿಸಿ ತಿಂಗಳಿಗೆ 25 ರೂಪಾಯಿ ಹೆಚ್ಚಾಗಿ ಕೊಡಲಾಗುತ್ತಿದೆ.

Land Revenue (distribution to Village Panchayets).

Q.—575. Sri U. M. MADAPPA (Chamarajanagar).—

Will the Government be pleased to state :—

(*a*) whether they have sanctioned the grant of 12 1/2 per cent of the land revenue collections to all village panchayets in the State for the years 1953-54 and 1954-55 according to the provisions of section 38 of the Village Panchayets and District Boards Act, 1952;

(*b*) if so, the total amount sanctioned each year (Districtwar information to be given);

(*c*) the land revenue realised from each District;

(*d*) the authority competent to distribute the amount to each Village Panchayet;

(*e*) while distributing, whether each Village Panchayet is being given 12 1/2 per cent of the realisations of land revenue of that village ?

A.—Sri T. CHANNIAH (Minister for Public Health and Local Self-Government).—

(*a*) Pending the preparation of final accounts of Land Revenue collections, a sum of Rs. 17,15,000 has been distributed to the Village Panchayets for the period from 14th February 1952 to 31st March 1954. The distribution for 1954-55 is not made yet.

(*b*) Statement appended below.

(*c*) Statement appended below.

(*d*) The Commissioner for Local Self-Government in Mysore.

(*e*) This is not necessary according to the provisions of Section 38 of the Village Panchayets and District Boards Act. A larger amount is given to Village Panchayets which undertake development works in the village and contribute some amount themselves The priorities are determined by the Commissioner for Local Self-Government.

(SRI T. CHANNIAH.)

	District	Amount distributed out of Land Revenue assignments	Land Revenue collected on average
		Rs.	Rs.
1	Bangalore	2,22,500	21,70,205
2	Kolar	2,40,000	13,11,335
3	Tumkur	2,75,000	16,15,072
4	Mysore	1,18,000	20,17,507
5	Mandya	1,23,000	11,31,705
6	Hassan	1,80,000	16,87,392
7	Shimoga	1,50,000	16,29,360
8	Chickmagalur	1,56,500	13,62,469
9	Chitaldrug	2,20,000	11,38,624
		17,15,000	1,10,63,669

12-30 P. M.

ಶ್ರೀ ಯು. ಎಂ. ಮಾದಪ್ಪ.—ಗ್ರಾಮಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟ್ 38ನೆಯ ಸೆಕ್ಷನ್ನಲ್ಲಿ ನಮೂದಾಗಿರುವಂತೆ ಈ ಹಂಚಿಕೆ ಆಗದೆ ಇರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಆ ರೀತಿ ಹಂಚಿಕೆಯಾದರೆ ಪ್ರತಿಯೊಂದು ಗ್ರಾಮಕ್ಕೂ ಇಷ್ಟಿಷ್ಟು ಎಂದು ಹರಿದು ಹಂಚಿಹೋಗಿ ಕೊನೆಗೆ ಯಾವ ಒಂದು ಗ್ರಾಮಕ್ಕೂ ಸಹ ಅಭಿವೃದ್ಧಿಕಾರ್ಯಕ್ಕೆ ಬೇಕಾಗುವಷ್ಟು ಹಣ ದೊರೆಯುವುದಿಲ್ಲ. ಆದುದರಿಂದ ಅವಶ್ಯಕತೆ ನೋಡಿ ಕೊಂಡು ಯುಕ್ತರೀತಿಯಲ್ಲಿ ಹಣವನ್ನೊದಗಿಸುತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಈ ಆಕ್ಟ್‌ನ್ನು ಜಾರಿಗೆತಂದುದರ ಉದ್ದೇಶವೇನು?

ಶ್ರೀ ಟಿ. ಚನ್ನಯ್ಯ.—ಈ ಆಕ್ಟ್‌ನಿಂದ ಜನರಿಗೆ ಹೆಚ್ಚಿನ ಪ್ರಯೋಜನವಾಗಲಿ ಎಂಬ ಉದ್ದೇಶದಿಂದ ಇದನ್ನು ಜಾರಿಗೆತಂದಿದೆ; ಅಂದಮಾತ್ರಕ್ಕೆ ಒಂದೇಸಾರಿ ಸರ್ಕಾರದವರು ಒದಗಿಸುವ ಹಣದಿಂದ ಎಲ್ಲಾ ಕೆಲಸ ಗಳೂ ಆಗುವುದಕ್ಕೆ ಸಾಧ್ಯವಿಲ್ಲ. ಈ ವರ್ಷ ಕೆಲವು ಗ್ರಾಮಗಳಲ್ಲಿ ಮುಂದಿನ ವರ್ಷ ಇನ್ನು ಕೆಲವು ಗ್ರಾಮ ಗಳಲ್ಲಿ ಅಭಿವೃದ್ಧಿಕಾರ್ಯವನ್ನು ನಡೆಸಿಕೊಂಡು ಹೋದರೆ ಈ ಕೆಲಸ ಸಾಧ್ಯವಾದೀತು.

ಶ್ರೀ ಯು. ಎಂ. ಮಾದಪ್ಪ.—ಈ ಬಗ್ಗೆ ತಾವು ಒದಗಿಸುವ ಹಣದ ಹಂಚಿಕೆಯನ್ನು ತೀರ್ಮಾನ ಮಾಡುವ ಅಧಿಕಾರಿಗಳಾರು?

ಶ್ರೀ ಟಿ. ಚನ್ನಯ್ಯ.—ಆಯಾ ಜಿಲ್ಲಾಧಿಕಾರಿಗಳ ಶಿಫಾರ್ಸಿನ ಮೇಲೆ ಎಲ್.ಎಸ್.ಜಿ. ಕಮಿಷನರ್ ಅದನ್ನು ಇದನ್ನು ತೀರ್ಮಾನಿಸುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಡೆಪ್ಯುಟಿ ಕಮಿಷನರ್ ಯಾರಿಗೆ ಶಿಫಾರ್ಸುಮಾಡುತ್ತಾರೋ ಅವರಿಗೆ ಸಿಕ್ಕುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ಹಾಗಲ್ಲ; ಅವರ ಮೇಲೆ ಅದನ್ನು ತನಿಖೆ ಮಾಡಿ ತೀರ್ಮಾನ ಮಾಡುವ ಅಧಿಕಾರ ಎಲ್. ಎಸ್. ಜಿ. ಕಮಿಷನರಿಗಿದೆ.

ಶ್ರೀ ಬಿ. ರಾಚಯ್ಯ.—ಎಲ್.ಎಸ್.ಜಿ. ಕಮಿಷನರ್ ಡಿಸ್ಟ್ರಿಕ್ಟ್‌ಗೆ ಹಂಚಿಕೆಮಾಡಿರುವ ಹಣವನ್ನು ಪೂರ್ತಿ ಯಾಗಿ ಕೊಡಲು ಸರ್ಕಾರದಲ್ಲಿ ಹಣದ ಅಭಾವದಿಂದ ಸಾಧ್ಯವಿಲ್ಲವೆಂದು ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ರಾಚಯ್ಯ.—ಮೈಸೂರು ಡಿಸ್ಟ್ರಿಕ್ಟ್‌ಗಾಗಿ 75 ಸಾವಿರ ರೂಪಾಯಿ ಹಂಚಿಕೆಯಾಗಿ ಆ ಪೈಕಿ 50 ಸಾವಿರ ರೂಪಾಯಿಗಳನ್ನು ವಾಪಸ್ಸು ತೆಗೆದು ಕೊಂಡಿರುವುದು ಗೊತ್ತೆ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ರಾಚಯ್ಯ.—ಹಾಗಿದ್ದರೆ ಅಲ್ಲಿಗೆ ಹಂಚಿಕೆ ಯಾಗಿರುವ ಹಣವನ್ನು ಪೂರ್ತಿಯಾಗಿ ಖರ್ಚುಮಾಡು ವಂತೆ instruction ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ವಿಚಾರಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.—ಕಡ್ಡಾಯವಾಗಿ ಶೇಕಡ 12½ಷ್ಟು ಲ್ಯಾಂಡ್ ರೆವೆನ್ಯೂ ಕಲೆಕ್ಷನ್ನನ್ನು ಗ್ರಾಮಪಂಚಾಯಿತಿಗಳಿಗೆ ಕೊಡಬೇಕೆಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇದೆ.

ಶ್ರೀ ಟಿ. ಸಿ. ಬಸಪ್ಪ.—ಹಾಗಾದರೆ ಇದಕ್ಕೆ ವಿರುದ್ಧವಾಗಿ ವರ್ತಿಸುವುದು ಸರಿಯೇ?

ಶ್ರೀ ಟಿ. ಚನ್ನಯ್ಯ.—ಹಾಗಲ್ಲ; ಅವಶ್ಯಕತೆ ನೋಡಿ ಕೊಂಡು ಈ ಹಂಚಿಕೆಯನ್ನು ಯುಕ್ತರೀತಿಯಲ್ಲಿ ಉಪಯೋಗಿಸಿಕೊಳ್ಳುವುದರಿಂದ ಪ್ರಯೋಜನ ಲಭಿಸಲಿ ಎಂಬ ದೃಷ್ಟಿಯಿಂದ ಹೀಗೆ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಇದರ ಪ್ರಕಾರ ಲೆಕ್ಕಾ ಚಾರ ಹಾಕಿದರೆ ನಮ್ಮ ಜಿಲ್ಲೆಯಲ್ಲಿ 30 ಲಕ್ಷ ರೂಪಾಯಿಗಳ ಹಂಚಿಕೆಯಾಗಬೇಕಾಗಿತ್ತು. ಹಾಗಿ ಲ್ಲದೆ ಬಡ್ಜೆಟ್‌ನಲ್ಲಿ ಬಹಳ ಕಡಮೆ ಒದಗಿಸಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈ ಬಗ್ಗೆ final accounts ಅಕೌಂಟೆಂಟ್ ಜನರಲ್ ಅವರಿಂದ ಬರದೇ ಏನೂ ಹೇಳುವ ಹಾಗಿಲ್ಲ.